**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ಸಂಖ್ಯೆಃ 5021/2024**

**ಪ್ರಾಸಾ -- 1**

**ಚಾಸಾ -- 1**

ಸಾಕ್ಷಿಯ ಹೆಸರು – ದೇವಯ್ಯ

ತಂದೆಯ ಹೆಸರು – ಮೇದಪ್ಪ

ವಯಸ್ಸು – 73 ವರ್ಷ

ವೃತ್ತಿ – ಏನೂ ಇಲ್ಲ

ವಿಳಾಸ – ಪರಕಟಗೇರಿ ಗ್ರಾಮ

ದಿಃ 24.02.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 2 ನನ್ನ ಪತ್ನಿ, ಚಾಸಾ 3 ಹಾಗೂ 4 ನನ್ನ ಮಕ್ಕಳು. ಮೃತ ಸೌಮ್ಯ ನನ್ನ ಮಗಳು. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಅಳಿಯ. ಈಗ್ಗೆ 17 ವರ್ಷಗಳ ಹಿಂದೆ ನನ್ನ ಮಗಳು ಸೌಮ್ಯಳನ್ನು ಆರೋಪಿಯೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತೇನೆ. ಮದುವೆಯಾದ ನಂತರ ಆರೋಪಿ ಹಾಗೂ ಸೌಮ್ಯ ಬೆಂಗಳೂರಿನಲ್ಲಿ ವಾಸವಾಗಿದ್ದರು. ನಂತರ ಅವರು ಬೆಸಗೂರು ಗ್ರಾಮದಲ್ಲಿ ವಾಸವಾಗಿದ್ದರು. ಆರೋಪಿ ಹಾಗೂ ಸೌಮ್ಯರವರಿಗೆ ಇಬ್ಬರು ಮಕ್ಕಳು. ಆರೋಪಿಯು ಸೌಮ್ಯರವರಿಗೆ ಕಿರುಕುಳ ಕೊಡುತ್ತಿದ್ದರು, ಯಾವ ವಿಷಯಕ್ಕೆ ಎಂದು ಗೊತ್ತಿಲ್ಲ. ಆರೋಪಿ ಸೌಮ್ಯ ರವರಿಗೆ ಕಿರುಕುಳ ನೀಡುತ್ತಿದ್ದ ಬಗ್ಗೆ ಊರಿನ ಜನರಿಂದ ಗೊತ್ತಾಯಿತು. ಆರೋಪಿ ಸೌಮ್ಯಳಿಗೆ ಬಹಳ ಬೈಯುತ್ತಿದ್ದರು ಹಾಗೂ ಆಕೆ ಯಾರ ಜೊತೆಗೂ ಮಾತನಾಡದಂತೆ ನಿರ್ಭಂಧಿಸುತ್ತಿದ್ದರು.

2. ದಿಃ 21.11.2023 ರಂದು ಸಂಜೆ 7.00 ಗಂಟೆಗೆ ಆರೋಪಿ ಫೋನ್ ಮಾಡಿ ಸೌಮ್ಯ ಕಾಣೆಯಾಗಿದ್ದಾಳೆ ಎಂದು ಹೇಳಿದರು. ಮಾರನೇ ದಿನ ಬೆಳಿಗ್ಗೆ ನಾನು ಹಾಗೂ ನನ್ನ ಎರಡನೇ ಅಳಿಯ ಆರೋಪಿಯ ಮನೆಗೆ ಹೋದೆವು. ಅಲ್ಲಿ ಹುಡುಕಾಡಿದಾಗ ನನ್ನ ಮಗಳು ಎಲ್ಲಿಯೂ ಸಿಕ್ಕಿರಲಿಲ್ಲ. ದಿಃ 23.11.2023 ರಂದು ಆರೋಪಿಯ ತಮ್ಮ ವಿಶು ಫೋನ್ ಮಾಡಿ ನಿಮ್ಮ ಮಗಳ ಶವ ಹೊಳೆಯಲ್ಲಿ ತೇಲುತ್ತಿದೆ ಎಂದು ಹೇಳಿದರು. ಆರೋಪಿಯ ಕಿರುಕುಳ ನೀಡಿ ನನ್ನ ಮಗಳು

ಸತ್ತಿರಬಹುದು ಅನ್ನುವ ಕಾರಣಕ್ಕೆ ನಾನು ಆರೋಪಿಯ ವಿರುದ್ಧ ದೂರ ನೀಡಿರುತ್ತೇನೆ. ಈಗ ತೋರಿಸಿದ ದೂರು ನಾನು ನೀಡಿದ ದೂರು ಆಗಿರುತ್ತದೆ. ಸದರಿ ದೂರಿನಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು ದೂರ ನೀಡಿದ ನಂತರ ಪೊಲೀಸರು ಆರೋಪಿಯನ್ನು ದಸ್ತಗಿರಿ ಮಾಡಿದ್ದರು. ಪೊಲೀಸರು ನನ್ನನ್ನು ನಂತರ ವಿಚಾರಣೆ ಮಾಡಿರಲಿಲ್ಲ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

3. ಸೌಮ್ಯ ರವರು ಮರಣಹೊಂದುವ 15 ದಿನಗಳ ಹಿಂದೆ ನನಗೆ ಫೋನ್ ಮಾಡಿ ಆಕೆಗೆ ಆರೋಪಿ ವಿನಾ ಕಾರಣ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಹೇಳಿಲ್ಲ, ನನ್ನ ಪತ್ನಿಯ ಬಳಿ ಹೇಳಿರುತ್ತಾರೆ. ದಿಃ 21.11.2023 ರಂದು ಬೆಃ ಸುಮಾರು 8.00 ಗಂಟೆಗೆ ಸೌಮ್ಯ ನನ್ನ ಪತ್ನಿಗೆ ಫೋನ್ ಮಾಡಿ ಆರೋಪಿ ದೈಹಿಕ ಹಿಂಸೆ ನೀಡಿ ಮುಖಕ್ಕೆ ದೋಸೆಯನ್ನು ಎಸೆದಿರುವುದಾಗಿ ಹಾಗೂ ಪೊ. ಸ್ಟೇಷನ್ ಹೋಗುವುದಾಗಿ ಹೇಳಿದ್ದು ಆಗ ನನ್ನ ಪತ್ನಿ ಸಮಾಧಾನ ಮಾಡಿ ಬುದ್ಧಿವಾದ ಹೇಳಿ ದುಡುಕುವುದು ಬೇಡ ಎಂದು ಹೇಳಿದ್ದರು ಎಂದರೆ ಸರಿ. ದಿಃ 23.11.2023 ರಂದು ಬೆಳಿಗ್ಗೆ ನಾನು ಹಾಗೂ ನನ್ನ ಕುಟುಂಬಸ್ಥರು ಹೋಗಿ ನೋಡಿದಾಗ ಆರೋಪಿಯ ಮನೆಯ ಹತ್ತಿರ ಹೊಳೆಯಲ್ಲಿ ಸೌಮ್ಯ ರವರ ಶವ ತೇಲುತ್ತಿತ್ತು ಎಂದರೆ ಸರಿ. ಆರೋಪಿಯ ಸೌಮ್ಯ ರವರಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿರುವ ಕಾರಣ ಆಕೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದು ಆರೋಪಿಯ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿ.

4. ಮದುವೆಯಾಗಿ ಆರೋಪಿ ಹಾಗೂ ಸೌಮ್ಯ 9 ವರ್ಷಗಳವರೆಗೆ ಚೆನ್ನಾಗಿದ್ದರು ಎಂದರೆ ಸರಿ. ನಂತರ ಆಕೆ ಮರಣ ಹೊಂದುವ 7 ವರ್ಷಗಳಿಂದ ಆರೋಪಿ ಆತನಿಗೆ ತುಂಬಾ ಸಾಲ ಇದೆ ನಿನ್ನಅಪ್ಪನ ಮನೆಗೆ

ಹೋಗಿ ಹಣ ತೆಗೆದುಕೊಂಡು ಬಾ ಎಂದು ಸೌಮ್ಯ ರವರಿಗೆ ಬೈದು ಹೊಡೆದು ಕಳುಹಿಸಿದ್ದು ಆಕೆ ನಮ್ಮ ಮನೆಗೆ ಬಂದು ಆರೋಪಿ ಆಕೆಗೆ ಬೈದು ಹೊಡೆದು ಹಣ ತರುವಂತೆ ಪೀಡಿಸಿರುವ ವಿಷಯ ತಿಳಿಸಿದ್ದು ನಾನು ನನ್ನ ಮಕ್ಕಳು ಚಾಸಾ 3 ಹಾಗೂ ಚಾಸಾ 4 ಹಾಗೂ ನನ್ನ ಅಳಿಯಂದಿರಿಗೆ ಫೋನ್ ಮಾಡಿ ತಿಳಿಸಿದಾಗ ಅವರುಗಳು ಬಂದು ನನ್ನ ಮಗಳು ಸೌಮ್ಯರವರಿಗೆ ಕರೆದುಕೊಂಡು ಹೋಗಿ ಆರೋಪಿಯ ಸಂಬಂಧಿಕರು ಹಾಗೂ ಅಕ್ಕಪಕ್ಕದವರು ಸೇರಿಕೊಂಡು ರಾಜೀ ತೀರ್ಮಾನ ಮಾಡಿ ಸೌಮ್ಯರವರನ್ನು ಆರೋಪಿಯ ಮನೆಗೆ ಬಿಟ್ಟು ಬಂದಿರುತ್ತೇವೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಗೊತ್ತಿಲ್ಲ. 2020 ನೇ ಇಸವಿ ಡಿಸೆಂಬರ್ ತಿಂಗಳ ಮೊದಲನೇ ವಾರದಲ್ಲಿ ನನ್ನ ಮಗಳು ಸೌಮ್ಯ ಮನೆಗೆ ಒಬ್ಬಳೇ ಬಂದಿದ್ದು ನನ್ನ ಗಂಡನ ಸಾಲ ಜಾಸ್ತಿಯಾಗಿದೆ ನೀನು ನಿನ್ನ ಅಪ್ಪನ ಹತ್ತಿರ ಹೋಗಿ ಹಣ ಕೇಳಿಕೊಂಡು ಬಾ ಎಂದು ಹೇಳಿದ್ದು, ಅವರಿಗೆ ವಯಸ್ಸಾಗಿದೆ, ಜೀವನ ಮಾಡುವುದು ಕಷ್ಟ ಎಲ್ಲಿಂದ ಹಣ ಕೊಡುತ್ತಾರೆ ಎಂದು ಹೇಳಿದಾಗ ಅವರು ಎಲ್ಲಿಂದಾದರೂ ತರಲಿ ನೀನು ಹೋಗಿ ಕೇಳು, ನೀನು ಹಣ ತರದೇ ವಾಪಸ್ಸು ಮನೆಗೆ ಬರಬೇಡ, ನಿನ್ನ ಅಪ್ಪ ಕೊಡಲಿಲ್ಲವೆಂದಾರದೆ ಎಲ್ಲಿಯಾದರೂ ಹೋಗಿ ಸಾಯಿ ಎಂದು ಆರೋಪಿ ಹೇಳಿರುತ್ತಾರೆ ಎಂದು ನನ್ನ ಮಗಳು ನನ್ನ ಹಾಗೂ ನನ್ನ ಪತ್ನಿಯ ಬಳಿ ಹೇಳಿರುತ್ತಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ನನ್ನ ಹೆಂಡತಿ ಆರೋಪಿಯ ಮನೆಗೆ ಹೋಗಿ ಆತನ ಸಂಬಂಧಿಕರು ಹಾಗೂ ಅಕ್ಕಪಕ್ಕದವರನ್ನು ಕರೆಸಿ ರಾಜೀ ತೀರ್ಮಾನ ಮಾಡಿ ಸೌಮ್ಯರವರನ್ನು ಆರೋಪಿಯ ಮನೆಯಲ್ಲಿ ಬಿಟ್ಟು ಬಂದಿರುತ್ತೇವೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಗೊತ್ತಿಲ್ಲ. 2022 ನೇ ಇಸವಿ ನವೆಂಬರ್ ತಿಂಗಳಲ್ಲಿ ಹುತ್ತರಿ ಹಬ್ಬದ ದಿನದಂದು ಸೌಮ್ಯ ರವರು ನನಗೆ ಫೋನ್ ಮಾಡಿ ಆರೋಪಿ ಹಬ್ಬಕ್ಕೆ ಮಕ್ಕಳಿಗೆ ಹೊಸ ಬಟ್ಟೆ ತರಲು ನೀನು ನಿಮ್ಮ ಅಪ್ಪನ ಮನೆಗೆ ಹೋಗಿ ಹಣ ತೆಗೆದುಕೊಂಡು ಬಾ ಎಂದು ಹೇಳಿ ಬೈದು, ಕೈಯಿಂದ ಹೊಡೆದು ನೀನು ಈ ದಿನ ಹೋಗಿ ಹಣ ತರಲೇಬೇಕು ಇಲ್ಲದಿದ್ದರೆ ನನ್ನ ಮನೆಗೆ ವಾಪಸ್ಸು ಬರಲೇ ಬೇಡ, ಇಲ್ಲದಿದ್ದರೆ ಎಲ್ಲಿಯಾದರೂ ಹೋಗಿ ಸಾಯಿ ಎಂದು ಹೇಳಿದ್ದು, ನನಗೆ ನನ್ನ ಗಂಡನ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ತಡೆಯಲು ಆಗುತ್ತಿಲ್ಲ, ನಾನು ಹೊಳೆಯಲ್ಲಿ ಬಿದ್ದು

ಸಾಯುತ್ತೇನೆ  ಎಂದು ಹೇಳಿರುತ್ತಾರೆ, ಆಗ  ನಾನು ಹಾಗೂ ನನ್ನ ಹೆಂಡತಿ ಸಮಾಧಾನ ಮಾಡಿ ದುಡುಕಬೇಡ ಎಲ್ಲ ಸರಿಯಾಗುತ್ತದೆ ಎಂದು ಸಮಾಧಾನ ಮಾಡಿರುತ್ತೇವೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಗೊತ್ತಿಲ್ಲ. 2023 ನೇ ಸಾಲಿನಲ್ಲಿ ಪ್ರತೀ ದಿನವೂ ಆರೋಪಿ ಸೌಮ್ಯರವರಿಗೆ ನಿನ್ನ ಅಪ್ಪನ ಮನೆಯಿಂದ ಎಷ್ಟು ಹೇಳಿದರೂ ಹಣ ತರಲಿಲ್ಲ, ನೀನು ನನ್ನ ಮನೆಯಲ್ಲಿ ಇರಬೇಡ ಎಂದು ಹೇಳಿ ಬೈದು ಜಗಳ ಮಾಡುತ್ತಿದ್ದು, ಈ ಬಗ್ಗೆ ಸೌಮ್ಯ ನನಗೆ ನನ್ನ ಪತ್ನಿ ಹಾಗೂ ಚಾಸಾ 3 ಹಾಗೂ 4 ರವರಿಗೆ ಫೋನ್ ಮಾಡಿ ಗಂಡನ ಹಿಂಸೆಯನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ, ಪದೇ ಪದೆ ಹಣ ತರುವಂತ ಪೀಡಿಸುತ್ತಿದ್ದು, ನಾನು ಸತ್ತು ಹೋಗುತ್ತೇನೆ ಎಂದು ಹೇಳುತ್ತಿದ್ದರು ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ  ಆಕೆ ಏನೂ ಹೇಳಿಲ್ಲ, ನನ ಪತ್ನಿಯ ಬಳಿ ಹೇಳಿರಬಹುದು. ಈ ಬಗ್ಗೆ ನಾನು ಗೆ ಪೊಲೀಸರ ಸಮಕ್ಷಮ ದಿಃ 24.11.2023 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ——— ನೀಡಿರುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ  ನಿಪಿ 2 ಎಂದು ಗುರುತಿಸಲಾಯಿತು. ನಿಪಿ 1 ಮತ್ತು  2 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

5. ನಾನು ಪೊನ್ನಂಪೇಟೆ ತಾಲ್ಲೂಕಿನ ಪರಕಟಗೇರಿ ವಾಸಿ. ಆರೋಪಿ ಪೊನ್ನಂಪೇಟೆ ತಾಲ್ಲೂಕಿನ ಬೆಸಗೂರು ಗ್ರಾಮದ ವಾಸಿ.  ಪರಕಟಗೇರಿಯಿಂದ ಬೆಸಗೂರು ಸುಮಾರು 40 ಕಿಮಿ ದೂರದಲ್ಲಿ ಇದೆ. ನನಗೆ  ಆರೋಪಿಯ ಚಿಕ್ಕಪ್ಪ ಗಿಣಿ ಎನ್ನುವವರು ಹೇಳಿದ್ದರು.  ನಾನು ದೂರು ನೀಡುವಾಗ ಗಿಣಿಯವರಿಂದ ವಿಚಾರ ತಿಳಿಯಿತು ಎಂದು ಹೇಳಿಲ್ಲ.  ಗಿಣಿಯವರು ಹೇಳಿದ ವಿಚಾರ ಹೊರತುಪಡಿಸಿ ನನಗೆ ಬೇರೆ ಏನೂ ವಿಚಾರ ಗೊತ್ತಿಲ್ಲ. ನನಗೆ ಮೊದಲ ಬಾರಿ ನನ್ನ ಮಗಳು ಕಾಣೆಯಾದ ಬಗ್ಗೆ ತಿಳಿಸಿದ್ದು ಆರೋಪಿ ಎಂದರೆ  ಸರಿ. ಆ ಸಮಯದಲ್ಲಿ ಆರೋಪಿಯ ಇಬ್ಬರು ಮಕ್ಕಳು ಅಲ್ಲಿಯೇ ಇದ್ದರು. ಈಗಲೂ ಕೂಡ ಆ ಇಬ್ಬರು ಮಕ್ಕಳು ಅಲ್ಲೇ ಇದ್ದಾರೆ.  ಮಾರನೇ ದಿನ ಹೋದಾಗ ಅಲ್ಲಿ ಸಾಕಷ್ಟು ಜನ ಹುಡುಕಾಡುತ್ತಿದ್ದರು. ಆರೋಪಿ ಕೂಡ ಹುಡುಕಾಡುತ್ತಿದ್ದರು ಎಂದರೆ ಸರಿ. ಆಗ  ಅಲ್ಲಿ ಪೊಲೀಸರು ಇದ್ದರು ಎಂದರೆ

ಸರಿ. ಪೊಲೀಸರು ಆ ದಿನ ನನ್ನನ್ನು ವಿಚಾರಿಸಿರಲಿಲ್ಲ, ಮಾರನೇ ದಿನ ದಿಃ 22.11.2023 ರಂದು ನನ್ನನ್ನು ವಿಚಾರಣೆ ಮಾಡಿದ್ದರು. ಏನಾಗಿದೆ ಎಂದು ಗೊತ್ತಿಲ್ಲದ ಕಾರಣ ನಾನು ಏನೂ ತಿಳಿಸಿರಲಿಲ್ಲ. ನಾವು ಹೋದ ನಂತರ ನನ್ನ ಮಗಳ ಶವವನ್ನು ಹೊಳೆಯಿಂದ ತೆಗೆದಿರುತ್ತಾರೆ. ನನ್ನ ಮಗಳ ಶವವನ್ನು ಹೊಳೆಯಿಂದ ತೆಗೆದ ಸಂದರ್ಭದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರಲಿಲ್ಲ. ದೂರನ್ನು ನನ್ನ ಮಗಳ ಮುಖಾಂತರ ಬರೆಸಿದ್ದೇನೆ. ದೂರನ್ನು ಪೊ. ಠಾಣೆಯಲ್ಲಿ ಬರೆಸಿರುತ್ತೇನೆ. ನಾನು ಮಗಳು ಬರೆದ ದೂರಿಗೆ ಸಹಿ ಮಾಡಿರುತ್ತೇನೆ. ಆರೋಪಿ ನನ್ನ ಮಗಳು ಸೌಮ್ಯಳಿಗೆ ಕಿರುಕುಳ ನೀಡುತ್ತಿದ್ದರು ಎಂದು ನನಗೆ ಯಾರು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)